■ ವಿಶಾಖ ಎನ್.

# ಪ್ರಿಯಾಂಕಾಗೆ ನಿಕ್ ಅಪರೂಪದ ಉಡುಗೊರೆ



ನಿಕ್ ಜೊನಾಸ್ ಸಿಹಿಯಾದ ಅಚ್ಚರಿಯೊಂದನ್ನು ತಮ್ಮ ಪತ್ನಿ ಪ್ರಿಯಾಂಕಾ ಚೋಪ್ರಾ ಅವರಿಗೆ ಇತ್ತೀಚೆಗೆ ನೀಡಿದರು. ತಮ್ಮ ಹಾಗೂ ಪತ್ನಿಯ ಚಲನವಲನ ಇರುವ ಪುಟ್ಟ ಟಮೇಟೆಡ್ ವಿಡಿಯೊವೊಂದನ್ನು ಅವರು ಇನ್‌ಸ್ಟಾಗ್ರಾಂನಲ್ಲಿ ಹಾಕಿದರು. ಪ್ರಿಯಾಂಕಾ ಅವರಿಗೂ ಅದನ್ನು ಟ್ಯಾಗ್ ಮಾಡಿ, 'ಲವ್' ಎಂಬ ಹ್ಯಾಷ್‌ಟ್ಯಾಗ್ ಹಾಕಿದರು.

ಸ್ಟೀಫೆನ್ ಸ್ಯಾಂಚೆಜ್ ಅವರ ಸಂಗೀತವನ್ನು ಹಿನ್ನೆಲೆಯಲ್ಲಿ ಬಳಸಿಕೊಂಡಿರುವ ನಿಕ್, ವಿಡಿಯೊಗೆ ಒಲವಿನ ಅರ್ಥ ತೊಡಿಸಿದ್ದಾರೆ. 'ಅಂಟಿಲ್ ಐ ಫೌಂಡ್ ಯೂ' (ನಿನ್ನನ್ನು ಹುಡುಕಿದ ತನಕ) ಎನ್ನುವ ಈ ಹಾಡೂ ಜನಪ್ರಿಯವಾಗಿದೆ. ಈ ವಿಡಿಯೊಗೆ ಖುದ್ದು ಸ್ಟೀಫನ್ ಸ್ಯಾಂಚೆಜ್ ಪ್ರತಿಕ್ರಿಯಿಸಿದ್ದು, 'ಓಹೋ... ನನ್ನ ಹಾಡು! ನೀವೆಲ್ಲ ಇದರಲ್ಲಿ ಮುದ್ದಾಗಿ ಕಾಣುತ್ತಿದ್ದೀರಿ' ಎಂದು ಬರೆದಿದ್ದಾರೆ.

ಎಷ್ಟೋ ಅಭಿಮಾನಿಗಳು ಈ ಪುಟ್ಟ ವಿಡಿಯೊಗೆ ಪ್ರತಿಕ್ರಿಯೆ ನೀಡಿದ್ದು, ಎಲ್ಲರೂ ಚೆನ್ನಾಗಿ ಕಾಣುತ್ತಿದ್ದೀರಿ ಎಂದೇ ಹೊಗಳಿದ್ದಾರೆ.

ಅಭಿನಯದಿಂದ ವಿಮುಖರಾದ ಮೇಲೆ ಪ್ರಿಯಾಂಕಾ 2021ರಲ್ಲಿ ಮೂರು ಗೀತೆಗಳ ವಿಡಿಯೊ ರೂಪಿಸಿದ್ದರು. 'ಅನ್‌ಫಿನಿಶ್ಡ್' ಎನ್ನುವ ಶೀರ್ಷಿಕೆಯ ಅನುಭವ ಕಥನದ ಪುಸ್ತಕವನ್ನೂ ಪ್ರಕಟಿಸಿದ್ದರು. ಅದು ನ್ಯೂಯಾರ್ಕ್‌ನಲ್ಲಿ ಅತಿ ಹೆಚ್ಚು ಮಾರಾಟಗೊಂಡ ಕೃತಿಗಳ ಯಾದಿಗೆ ಸೇರಿತ್ತು. ಹೇರ್‌ಕೇರ್ ಬ್ರ್ಯಾಂಡ್, ರೆಸ್ಟೊರೆಂಟ್, ಹೋಮ್‌ವೇರ್ ಲೈನ್ ಹೀಗೆ ಹಲವು ಉದ್ಯಮಗಳಲ್ಲಿ ತೊಡಗಿಕೊಂಡಿರುವ ಪ್ರಿಯಾಂಕಾ, ಲಿಂಗ ತಾರತಮ್ಯ ಹೋಗಲಾಡಿಸುವ ಚಳವಳಿಗಳಲ್ಲೂ ಭಾಗವಹಿಸುತ್ತಿದ್ದಾರೆ. ನಿಕ್ ಜೊನಾಸ್ ಅಮೆರಿಕದ ಹಾಡುಗಾರನಾಗಿದ್ದು, ಇಬ್ಬರಿಗೂ ಮಗಳಿದ್ದಾಳೆ. ■

# ಜೂ. ಎನ್‌ಟಿಆರ್–ಜಾಹ್ನವಿ ಜೋಡಿ



'ಜನತಾ ಗ್ಯಾರೇಜ್', 'ಮಿರ್ಚಿ', 'ಆಚಾರ್ಯ', 'ಶ್ರೀಮಂತುಡು', 'ಭರತ್ ಅನೆ ನೇನು' – ಇವೆಲ್ಲ ಸಿನಿಮಾಗಳನ್ನು ಯಾವ ವಿಭಾಗಕ್ಕೆ ಹಾಕಬಹುದು? ತೆಲುಗಿನ ಹದವರಿತ ಮಸಾಲೆ ಚಿತ್ರಗಳಿವು ಎಂದು ಮೇಲ್ನೋಟ್ಟದಲ್ಲಿ ಹೇಳುವಹಾಗಿಲ್ಲ. ಅವುಗಳ ವೈವಿಧ್ಯದ ಕುರಿತು ದೊಡ್ಡದೊಂದು ಪ್ರಬಂಧವನ್ನೇ ಬರೆಯಬಹುದು. ನಿರ್ದೇಶಕ ಕೊರಟಾಲ ಶಿವ ಅವರ ಸಿನಿಮಾ ಜಾಣತನಕ್ಕೆ ಈ ಸಿನಿಮಾಗಳು ಉದಾಹರಣೆಗಳು. ಈಗ ಜೂನಿಯರ್ ಎನ್‌ಟಿಆರ್ ಮತ್ತೆ ಈ ನಿರ್ದೇಶಕರನ್ನು ನೆಚ್ಚಿಕೊಳ್ಳುತ್ತಿದ್ದಾರೆ. ಇನ್ನೂ ಹೆಸರಿಡದ ಸಿನಿಮಾ ಮುಹೂರ್ತ ನೆರವೇರಿದ್ದು, ಅದಕ್ಕೆ ಶ್ರೀದೇವಿ ಪುತ್ರಿ ಜಾಹ್ನವಿ ಕಪೂರ್ ನಾಯಕಿಯಾಗಿ ನಿಕ್ಕಿಯಾಗಿದ್ದಾರೆ. ಈಗ ಸಿನಿಮಾ ವಿಶ್ಲೇಷಕರು ಈ ನಟಿಯ ಭವಿತವ್ಯ ಹೇಗಿದ್ದೀತೆಂಬ ಜಿಜ್ಞಾಸೆಯಲ್ಲಿದ್ದು, ತಾಯಿ ಶ್ರೀದೇವಿಯ ವೃತ್ತಿಬದುಕನ್ನು ಮೆಲುಕುಹಾಕುತ್ತಿದ್ದಾರೆ.



ಶ್ರೀದೇವಿ ತಮಿಳಿನಲ್ಲಿ ಬಾಲನಟಿಯಾಗಿ ಗುರುತಾಗಿ, ನಾಯಕಿಯಾಗಿ ಛಾಪು ಮೂಡಿಸಿದ ನಂತರ ಹಿಂದಿ ಸಿನಿಮಾಗೆ ಲಗ್ಗೆ ಇಟ್ಟಿದ್ದವರು. ಅಲ್ಲಿ ಜಿತೇಂದ್ರ ತರಹದ ನೃತ್ಯ ಮಾಡಲು ಬಾರದ ನಟನೊಟ್ಟಿಗೆ ಹೆಜ್ಜೆ ಹಾಕಿಯೂ ಸಿನಿಮಾ ಗೆಲ್ಲಿಸಿ ಕೊಟ್ಟವರು. 'ಮಿಸ್ಟರ್ ಇಂಡಿಯಾ' ಸಿನಿಮಾದ ಸಕ್ಕೆ ದೇಹಲಾಲಿತ್ಯ, 'ಚಾಂದಿನಿ' ಸಿನಿಮಾದಲ್ಲಿನ ಭಾವತೀವ್ರತೆ ಇವೆಲ್ಲ ಶ್ರೀದೇವಿ ಮಾಡಿದ ಮೋಡಿಗೆ ಕೆಲವು ಉದಾಹರಣೆಗಳಷ್ಟೆ.

ಶ್ರೀದೇವಿ ಪುತ್ರಿ ಜಾಹ್ನವಿ ಕಪೂರ್ ಏಳೆಂಟು ವರ್ಷಗಳಿಂದ ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳಲು ಪ್ರಯತ್ನಿಸುತ್ತಲೇ ಇದ್ದಾರೆ. 'ಸೈರಾಟ್' ಮರಾಠಿ ಸಿನಿಮಾದ ರೀಮೇಕ್ ಧಡಕ್ ಮೂಲಕ ಕಾಲಿಟ್ಟ ಅವರು, ಗುಂಜನ್ ಸಕ್ಸೇನಾ ಪಾತ್ರದಲ್ಲಿ ವಿಮರ್ಶಕರ ಮೆಚ್ಚುಗೆ ಗಳಿಸಿದರು. ಮಲಯಾಳಂನಲ್ಲಿ ಗೆದ್ದಿದ್ದ 'ಹೆಲೆನ್' ಚಿತ್ರದ ರೀಮೇಕ್ 'ಮಿಲಿ'ಯಲ್ಲೂ ಅವರು ಅಭಿನಯಿಸಿದರು. ಅದು ಜನಮೆಚ್ಚುಗೆ ಗಳಿಸಲಿಲ್ಲ.

ಈಗ ದಕ್ಷಿಣದಲ್ಲಿ ಅವರು ಜೂನಿಯರ್ ಎನ್‌ಟಿಆರ್ ಜೊತೆ ತೆರೆಮೇಲೆ ಕಾಣಿಸಿಕೊಳ್ಳುವ ಅವಕಾಶ ಪಡೆದಿದ್ದಾರೆ. ಅದರಲ್ಲಿ ಗೆದ್ದರೆ ಅವರ ವೃತ್ತಿಬದುಕಿನ ಗ್ರಾಫ್ ಬದಲಾಗುವುದಂತೂ ಖಚಿತ. ■